# ಮೆದುಳು ಜ್ವರ ಒಂದು ರೋಗ

---

**<u>ಇದರ ಲಕ್ಷಣಗಳು</u>**

- ❖ ವಿಪರೀತ ಜ್ವರ
- ❖ ವಾಂತಿ ಮತ್ತು ತಲೆನೋವು
- ❖ ಮೈನಡುಕ ಬಂದು ಎಚ್ಚರ ಅಥವಾ ಪ್ರಜ್ಞೆ ತಪ್ಪುವುದು

**ಸಾಮಾನ್ಯವಾಗಿ ಹಂದಿಯನ್ನು ಕಚ್ಚಿದ ಒಂದು ಜಾತಿಯ ಸೊಳ್ಳೆಯು ಮನುಷ್ಯರನ್ನು ಕಚ್ಚಿದರೆ ಈ ರೋಗ ಬರುತ್ತದೆ.**

## ಅದ್ದರಿಂದ

1. ವಿಶೇಷವಾಗಿ ಮಕ್ಕಳಿಗೆ ಸೊಳ್ಳೆ ಪರದೆ ಬಳಸಿ.
2. ನಿಮ್ಮ ವಾಸ ಸ್ಥಳ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿಡಲು ಮಹಾನಗರ ಪಾಲಿಕೆಯೊಂದಿಗೆ ಸಹಕರಿಸಿ.
3. ಮಹಾನಗರ ಪಾಲಿಕೆ ಸಿಬ್ಬಂದಿಯು ಕ್ರಿಮಿನಾಶಕ ಔಷಧಿ ಸಿಂಪಡಿಸಲು ಬಂದಾಗ ಸಹಕರಿಸಿ.
4. ಜ್ವರ ಕಾಣಿಸಿಕೊಂಡ ಕೂಡಲೇ ರೋಗಿಯನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಮಾಡಿಸಿರಿ.
5. ಮನೆಯಲ್ಲಿಯ ನೀರಿನ ತೊಟ್ಟಿಗಳನ್ನು ವಾರಕ್ಕೊಮ್ಮೆ ಸ್ವಚ್ಛಗೊಳಿಸಿ, ನೀರು ಬದಲಾಯಿಸಿ.
6. ಮನೆ ಮುಂದಿನ ಚರಂಡಿಗಳಲ್ಲಿ ಕಸಕಡ್ಡಿ ಹಾಗೂ ಇನ್ನಿತರ ಅನುಪಯುಕ್ತ ವಸ್ತುಗಳನ್ನು ಹಾಕದೇ ಅದಕ್ಕಾಗಿ ನಿಗದಿಪಡಿಸಿದ ತೊಟ್ಟಿಗಳಲ್ಲಿ ಹಾಕಿರಿ.
7. ನಿಮ್ಮ ಮನೆ ಹಾಗೂ ಅಂಗಡಿಗಳ ಮುಂದಿರುವ ಚರಂಡಿಗಳ ಮೇಲೆ ಕಲ್ಲು ಬಂಡೆಗಳನ್ನು ಹಾಕಬೇಡಿರಿ.
8. ವಾಸದ ಮನೆಯ ಸುತ್ತಮುತ್ತಲು ನೀರು ನಿಲ್ಲದಂತೆ ನೋಡಿಕೊಳ್ಳಿ ಹಾಗೂ ಅನಾವಶ್ಯಕ ಗಿಡಗಂಟೆಗಳನ್ನು ಕಡಿದು ಸ್ವಚ್ಛಮಾಡಿಸಿರಿ.
9. ಸೊಳ್ಳೆ ನಾಶಕ ಹೊಗೆ ಯಂತ್ರ ಫಾಗಿಂಗ್ ಮಿಷನ್ ನಿಮ್ಮ ಬೀದಿಗೆ ವಾರಕ್ಕೊಮ್ಮೆ ಬಂದಾಗ ನಿಮ್ಮ ಮನೆಗಳ ಕಿಟಕಿ ಬಾಗಿಲು ಮುಚ್ಚಬೇಡಿ ಮತ್ತು ಅವುಗಳನ್ನು ಪೂರ್ಣವಾಗಿ ತೆರೆದು ಸಿಬ್ಬಂದಿಗೆ ಪೂರ್ಣವಾಗಿ ಸಹಕಾರ ನೀಡಿ ಪ್ರೋತ್ಸಾಹಿಸಿರಿ.
10. ಕೊಳವೆ ಬಾವಿಯ ಸುತ್ತ-ಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಿ.
11. ಮನೆಯ ಸುತ್ತ-ಮುತ್ತ ಇರುವ ಸಣ್ಣ ಗುಂಡಿಗಳನ್ನು ಮಣ್ಣಿನಿಂದ ಮುಚ್ಚಿರಿ.
12. ಮನೆಯ ಕಿಟಕಿ ಬಾಗಿಲುಗಳಿಗೆ ತಂತಿ ಜಾಲರಿಯನ್ನು ಅಳವಡಿಸಿ.